ಹುಟ್ಟುಹಾಕಿ ಅವರನ್ನು ಬದಲಿಸತೊಡಗಿದವು. ಕೊನೆಯ ಪಕ್ಷ ನಿಜವಾದ ಗಾಂಧೀವಾದಿಗಳಾದರೂ ಅಸ್ಪೃಶ್ಯತೆಯನ್ನು ವಿರೋಧಿಸುವ ಮನಃಸ್ಥಿತಿಯನ್ನು ರೂಢಿಸಿಕೊಂಡರು. ಹೊಸ ತಲೆಮಾರಿಗೆ ಗಾಂಧೀಜಿಯ ಕಳಕಳಿ ಅರ್ಥವಾಗತೊಡಗಿತು. ಅಂಬೇಡ್ಕರ್ ಅವರ ಚಾರಿತ್ರಿಕ 'ಅನ್ನಿಹಿಲೇಶನ್ ಆಫ್ ಕ್ಯಾಸ್ಟ್' (ಜಾತಿವಿನಾಶ) ಪುಸ್ತಕಕ್ಕೆ ಗಾಂಧೀ ಪ್ರತಿಕ್ರಿಯೆ, ನಂತರ ಅಂಬೇಡ್ಕರ್ ಉತ್ತರ ಇವೆಲ್ಲವೂ ಈ ಪತ್ರಿಕೆಯಲ್ಲಿ ಪ್ರಕಟವಾದವು. ಅಂಬೇಡ್ಕರ್ ಜೊತೆಗಿನ ಸಂವಾದದ ನಂತರ ಪ್ರಕಟವಾದ 'ಹರಿಜನ್' ಸಂಚಿಕೆಯೊಂದರಲ್ಲಿ 'CASTE HAS TO GO' ಎಂದು ಗಾಂಧೀಜಿ ನಿರ್ಣಾಯಕವಾಗಿ ಬರೆದರು. ಹಿಂದೆಲ್ಲ ವರ್ಣ, ಜಾತಿಗಳನ್ನು ಕುರಿತು ಗೊಂದಲಮಯವಾಗಿ ಯೋಚಿಸುತ್ತಿದ್ದ ಗಾಂಧೀ ಚಿಂತನೆಯಲ್ಲಿ ಇದು ಅತ್ಯಂತ ಮುಖ್ಯ ಪಲ್ಲಟವೂ ಆಗಿತ್ತು. ಆ ಕಾಲದ ರಾಜಕೀಯ, ಸಾಮಾಜಿಕ ಚರ್ಚೆಗಳು, ಕಾಂಗ್ರೆಸ್ ಪಕ್ಷಕ್ಕೆ ಸಲಹೆಗಳು ಕೂಡ ಇಲ್ಲಿ ಪ್ರಕಟವಾಗತೊಡಗಿದವು. 'ಹರಿಜನ್' ಪತ್ರಿಕೆ 1946ರವರೆಗೂ ಪ್ರಕಟವಾಗುತ್ತಲೇ ಇತ್ತು.

## 4

ತಾವು ಸಂಪಾದಿಸಿದ ಪತ್ರಿಕೆಗಳಲ್ಲಿ ವೈವಿಧ್ಯವನ್ನೂ ಗಾಂಧೀಜಿ ತರುತ್ತಿದ್ದರು. ಒಳ್ಳೆಯ ಪುಸ್ತಕವೊಂದು ಕಂಡರೆ ಆ ಕುರಿತು ಗಾಂಧೀಜಿಯೇ ಬರೆಯುತ್ತಿದ್ದರು. ಕೆಟ್ಟ ಪುಸ್ತಕಗಳನ್ನು ಟೀಕಿಸುತ್ತಿದ್ದರು. ಆ ಕಾಲದ ದೊಡ್ಡ ಚಿಂತಕ, ಚಿಂತಕಿಯರು, ಜೆ.ಸಿ. ಕುಮಾರಪ್ಪನವರಂಥ ಗ್ರಾಮಪರ ಅರ್ಥಶಾಸ್ತ್ರಜ್ಞರು ಈ ಪತ್ರಿಕೆಗಳಲ್ಲಿ ಬರೆಯುತ್ತಿದ್ದರು. 'ಕುಮಾರಪ್ಪನವರ ಬರವಣಿಗೆ ಖಾರ' ಎಂದೊಬ್ಬರು ಗಾಂಧೀಜಿಯ ಬಳಿ ದೂರಿದರು. 'ಇರಲಿ ಬಿಡಿ. ಕುಮಾರಪ್ಪ ಮದ್ರಾಸಿನವರು. ಅಲ್ಲಿ ಮೆಣಸಿನಕಾಯಿ ಜಾಸ್ತಿ ಬಳಸುತ್ತಾರೆ. ಅದಕ್ಕೇ ಅವರ ಬರವಣಿಗೆ ಖಾರ!' ಎಂದು ಗಾಂಧೀಜಿ ನಕ್ಕರು. ಕಟು ಸತ್ಯವನ್ನು ಹೇಳಲು, ಪ್ರಕಟಿಸಲು ಸಂಪಾದಕ ಗಾಂಧೀಜಿ ಸದಾ ಸಿದ್ಧರಿದ್ದರು. ಲೋಹಿಯಾ ಬರಹವನ್ನೂ ಗಾಂಧೀಜಿ ಆಯ್ದು ಪ್ರಕಟಿಸಿದ್ದರು. ನೂರಾರು ಹಿರಿಯ, ಕಿರಿಯ ಲೇಖಕರು ಗಾಂಧೀಜಿ ಸಂಪಾದಿಸಿದ ಪತ್ರಿಕೆಗಳಲ್ಲಿ ಬರೆಯುತ್ತಾ ನೇರ ಸರಳ, ಸ್ಪಷ್ಟ ಭಾಷೆಯಲ್ಲಿ ಬರೆಯುವ ನಮ್ರತೆಯನ್ನೂ, ಕಲೆಯನ್ನೂ ಕಲಿತರು; ಬಡವರ, ಹಳ್ಳಿಗಳ ಪರವಾದ ಕಾಳಜಿಯ ಬರಹಗಾರರಾಗಿ ವಿಕಾಸಗೊಂಡರು. ಹಲವರು ತಂತಮ್ಮ ತಾಯ್ನುಡಿಗಳಲ್ಲಿ ಬರೆಯಲು ಕೂಡ ಗಾಂಧೀಜಿ ಪ್ರೇರಣೆಯಾದರು.

ಗಾಂಧೀ ಪತ್ರಿಕೋದ್ಯಮ ಕುರಿತು ಈ ಲೇಖನ ಬರೆಯುತ್ತಿರುವಾಗ, ಕರ್ನಾಟಕದಲ್ಲಿ ಗಾಂಧೀ ಪ್ರಭಾವಕ್ಕೊಳಗಾದ ಎಚ್.ಎಸ್. ದೊರೆಸ್ವಾಮಿಯವರು ತಮ್ಮ ತಾರುಣ್ಯದಲ್ಲಿ ಕೆಲಸ ಮಾಡಿದ ಬೆಂಗಳೂರಿನ ಪತ್ರಿಕಾಲಯಗಳು ಹಾಗೂ ಸರ್ಕಾರಗಳಿಗೆ ಹೆದರದೆ ದಿಟ್ಟವಾಗಿ ಸಂಪಾದಿಸಿದ 'ಪೌರವಾಣಿ', 'ಪೌರವೀರ' ಪತ್ರಿಕೆಗಳ ಖದರ್ ನೆನಪಾಗುತ್ತದೆ. ಗಾಂಧೀ ಚಿಂತನೆಗಳ ಬಗ್ಗೆ ಹೆಚ್ಚಿನ ಒಲವಿರದಿದ್ದ ಕನ್ನಡ ಕವಿ ಡಾ. ಸಿದ್ಧಲಿಂಗಯ್ಯನವರಿಗೆ ಲಂಕೇಶರು 1980ರ ದಶಕದಲ್ಲಿ 'ಹರಿಜನ್' ಪತ್ರಿಕೆಯ ಬರಹಗಳನ್ನು ಓದಲು ಸಲಹೆ ಮಾಡಿದರು. 'ಹರಿಜನ್' ಪತ್ರಿಕೆಗಳ ಸಂಪುಟಗಳನ್ನು ಒಂದೊಂದಾಗಿ ಓದಿದ ಸಿದ್ಧಲಿಂಗಯ್ಯ, ಗಾಂಧೀಜಿಯ ದಲಿತ ಪರ ಕಾಳಜಿಯನ್ನು ಹಾಗೂ ಗಾಂಧೀಚಿಂತನೆಯ ಮಹತ್ವವನ್ನು ಗ್ರಹಿಸಿದ್ದು ನೆನಪಾಗುತ್ತದೆ. 'ಲಂಕೇಶ್ ಪತ್ರಿಕೆ' ಶುರು ಮಾಡಿದ ನಂತರ ಸ್ವತಃ ಲಂಕೇಶರು ಗಾಂಧೀಜಿಯ ಬರಹಗಳ ಸರಳತೆ ಹಾಗೂ ನೈತಿಕತೆಗಳಿಂದ ಕೂಡ ಗದ್ಯ ಬರಹದ ಹೊಸ ಕಲೆಯನ್ನು ರೂಢಿಸಿಕೊಂಡರು. ಲಂಕೇಶರ ಈ ಘಟ್ಟದ ಗದ್ಯದಿಂದಾಗಿ ಕನ್ನಡ ಪತ್ರಿಕೋದ್ಯಮಕ್ಕೆ, ಕನ್ನಡ ಗದ್ಯಕ್ಕೆ ಸಿಕ್ಕ ಹೊಸ ತಿರುವು ಕೂಡ ಇವತ್ತು ಅಪೂರ್ವವಾಗಿ ಕಾಣತೊಡಗುತ್ತದೆ.

ಈ ಲೇಖನಕ್ಕಾಗಿ ವಿವರಗಳನ್ನು ಆಯ್ದುಕೊಂಡಿರುವ ರಾಜಮೋಹನ ಗಾಂಧಿಯವರ 'ಮೋಹನ್ ದಾಸ್: ಎ ಟ್ರೂ ಸ್ಟೋರಿ ಆಫ್ ಎ ಮ್ಯಾನ್: ಹಿಸ್ ಪೀಪಲ್, ಅಂಡ್ ಆ್ಯನ್ ಎಂಪೈರ್', ಎಸ್.ಎನ್. ಭಟ್ಟಾಚಾರ್ಯರ 'ಮಹಾತ್ಮ ಗಾಂಧೀಜಿ, ದಿ ಜರ್ನಲಿಸ್ಟ್', ಗಾಂಧೀಜಿಯವರ ಆಯ್ದ ಬರಹಗಳ ಪುಸ್ತಕ 'ಲಾ ಅಂಡ್ ದಿ ಲಾಯರ್ಸ್' ಮುಂತಾದ ಪುಸ್ತಕಗಳು ಸೂಚಿಸುವಂತೆ ಗಾಂಧೀಜಿ ಆ ಕಾಲದ ಪತ್ರಿಕೋದ್ಯಮದ ಗೊತ್ತು ಗುರಿಗಳನ್ನು ಸ್ಪಷ್ಟವಾಗಿ ರೂಪಿಸಿದರು. ಗ್ರಾಮ, ನಗರಗಳ ಪತ್ರಕರ್ತರಿಬ್ಬರೂ ಗಾಂಧೀ ಪತ್ರಿಕೋದ್ಯಮದಿಂದ ಬದಲಾದರು.